ಶ್ರೀ ಎಸ್. ಆರ್. ಕಂಠಿ.—ಸರ್ಕಾರದವರು ರೂಲ್ಸ್ ಪ್ರಕಾರ ಪರಿಹಾರ ನೀಡುತ್ತಾರೆ.

Sri J. P. SARWESH.—Will the Government see that the information about Scheduled Castes and Scheduled Tribes is made available ?

Sri S. R. KANTHI.—The labour involved is not commensurate with the value of the information.

ಶ್ರೀ ಎಸ್. ಶಿವಪ್ಪ.—ಇಲ್ಲಿಗೆ ಸುಮಾರು 8 ವರ್ಷಗಳಿಂದಲೂ ಇದನ್ನು ಮಾಡುತಿರುವುದು ಸರ್ಕಾರದವರ ತಪ್ಪು. ಈ ತಪ್ಪಿನಿಂದ ಆ ಜನರ ಹಕ್ಕುಬಾಧ್ಯತೆಗಳಿಗೆ ತೊಂದರೆ ಬಂದಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಇದು ಸ್ವಲ್ಪ ಕಾಂಪ್ಲಿಕೇಟೆಡ್ ಪ್ರಶ್ನೆ. ಅದರಿಂದ ರೀಟೇಗಾಗಿದೆ.

Sri S. RAJAGOPAL.—When they remain as temporary officials, are they not losing certain facilities of Government servants ?

Sri S. R. KANTHI.—No.

ಶ್ರೀ ಬಿ. ಎಲ್. ಗೌಡ.—ಸರಕಾರದಲ್ಲಿ ಸೂತ್ರ ಕ್ರಮ ಕೈಗೊಳ್ಳದಿರುವುದರಿಂದ 8-10 ಜನ ಪೆಡ್ಯೂರ್ಡ್ ಕಾಸ್ಟಿನವರಿಗೆ ತೊಂದರೆಯಾಗಿಲ್ಲವೇ ?

ಶ್ರೀ ಎಸ್. ಆರ್. ಕಂಠಿ. - ಆಗಿಲ್ಲ.

ಶ್ರೀ ಬಿ. ಎಲ್. ಗೌಡ.—1956ಕ್ಕೆ ಹಿಂದೆ ಇದ್ದವರಿಗೆ ಈ ಬ್ಯಾನ್ ಅಪ್ಲೈಯಾಗುವುದಿಲ್ಲ. 1956ಕ್ಕೆ ಇತ್ತೀಚಿನವರಿಗೆ ಮಾತ್ರ ಇದು ಅಪ್ಲೈ ಆಗುತ್ತದೆ. 1956ಕ್ಕೆ ಹಿಂದಿದ್ದ ಎಷ್ಟು ಜನಗಳಿಗೆ ಕನ್‌ಫರ್ಮ್ ಆಗಿದೆ ?

ಶ್ರೀ ಎಸ್. ಆರ್. ಕಂಠಿ.—ಆ ಹಿಂದಿನವರ ಹೆಸರನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಪಿ. ವೆಂಕಟ್ಟರಿಯಪ್ಪ.—ಇದರಿಂದ ಸರ್ಕಾರದ ಕೆಲಸಕ್ಕೆ ತೊಂದರೆಯಾಗುತ್ತದೆಂಬುದು ಸರ್ಕಾರದವರಿಗೆ ತಿಳಿದಿದೆಯೇ ?

Mr. SPEAKER.—That question has already been answered.

Construction of a Project across Arkavathi river near Harobele in Kanakapura Taluk.

*Q.—83. Sri K. L. SHIVALINGE GOWDA (Virupakshipura).—

Will the Government be pleased to state :—

(*a*) whether an estimate for the construction of a Project across Arkavathi River near Harobele, Uyyamballi Hobli, Kanakapura taluk has been received by them for sanction ;

(*b*) if so, when the concerned records were received by them ;

(*c*) the difficulties in the way of the Government sanctioning the said project ?

A.—Sri VEERENDRA PATIL (Minister for Public Works) [on behalf of SRI S. NIJALINGAPPA (Chief Minister)].—

(*a*) Yes.

(*b*) July 1963.

(*c*) The project is under consideration of Government.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಪರಿಶೀಲನೆ ಮುಗಿಯಲು ಇನ್ನೆಷ್ಟು ದಿವಸಬೇಕು ?

†ಶ್ರೀ ವೀರೇಂದ್ರ ಪಾಟೀಲ್.—ಚೀಫ್ ಇಂಜಿನಿಯರಿಂದ ಸರ್ಕಾರಕ್ಕೆ ತಾ॥ 27-7-63ರಲ್ಲಿ ರೆಕಾರ್ಡ್ಸ್ ಬಂದಿದೆ. ಇದಕ್ಕೆ 85 ಲಕ್ಷ ರೂಪಾಯಿಗಳು ಖರ್ಚಾಗುತ್ತವೆಂದು ಹೇಳಿದ್ದಾರೆ. ಅದನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ ಎಂದು ಹೇಳಿದ್ದೇವೆ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಈಗ ಹರಿದು ವೇಸ್ಟಾಗಿ ಹೋಗುತ್ತಿರುವ ನೀರನ್ನು ನಾವು ಉಪಯೋಗ ಮಾಡಕೊಳ್ಳದಿದ್ದರೆ ಮುಂದೆ ಈ ನೀರೆತ್ತಾ ಮುಖ್ಯವಾಗುತ್ತದೆಂಬ ಅಂಶ ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ವಿರೇಂದ್ರ ಪಾಟೀಲ್.—ಸರ್ಕಾರದವರಿಗೆ ಎಲ್ಲಾ ವಿಚಾರಗಳೂ ಗೊತ್ತಿವೆ. ಆದರೆ ದುಡ್ಡಿಲ್ಲ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಬೆಂಗಳೂರು ಜಿಲ್ಲೆಯಲ್ಲಿ ಇದೊಂದೇ ಮಾಡಿಯಂ ಪ್ರಾಜೆಕ್ಟಾದ್ದರಿಂದ ಇದನ್ನು ಬೇಗ ಕೈಗೊಳ್ಳುತ್ತೀರಾ?

ಅಧ್ಯಕ್ಷರು.—ಹಣ ಬಂದ ನಂತರ ಬೇಗ ಮಾಡಬಹುದು.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ದೇಶದಲ್ಲಿ ಇತರ ಕಡೆಗಳಿಗೆಲ್ಲಾ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿರುವಾಗ ಇಲ್ಲಗೆ ದುಡ್ಡಿಲ್ಲ ಎಂದರೆ ಹೇಗೆ? ಇದಕ್ಕೂ ಸ್ಪೆಷರ್ ಗ್ರ್ಯಾಂಟನ್ನು ಪಡೆದು ಬೇಗ ಕೈಗೊಳ್ಳುವಂತೆ ಮಾಡುತ್ತೀರಾ?

ಶ್ರೀ ವಿರೇಂದ್ರ ಪಾಟೀಲ್.—ಈ ಕೆಲಸ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೂ ಇದೆ. ಇಲ್ಲ ಎಂದೇನೂ ನಾನು ಹೇಳಲಿಲ್ಲ. ಕಾವೇರಿ ಅಗ್ರಿಮೆಂಟಿನ ಪ್ರಕಾರ ನ ವು ನೀರನ್ನು ಉಪಯೋಗ ಮಾಡಿಕೊಳ್ಳಲೇ ಬೇಕು. ದುಡ್ಡಿಗಾಗಿ ಸರ್ವ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆ. ಇದರಿಂದ ಒನಗಳಿಗೂ ಅನುಕೂಲವಾಗಬೇಕು. ಸರ್ಕಾರಕ್ಕೂ ಸಾಕಷ್ಟು ರಿಟರ್ನ್ ಬರಬೇಕು. ಇದನ್ನೆಲ್ಲಾ ಸರ್ಕಾರದವರು ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆಂಧ್ರಪ್ರದೇಶದಲ್ಲೂ ಮದ್ರಾಸ್ ಪ್ರಾಂತದಲ್ಲೂ ನೀರಾವರಿ ಕಾಂಗ್ರಾರಿಗಳು ಹೆಚ್ಚಿನ ಸಂಖ್ಯೆಯಲ್ಲಾಗಿರುವುದರಿಂದ ಇಲ್ಲಷ್ಟು ಜನ ಮಂತ್ರಿಗಳು ನಮ್ಮನೆ ಕುಳಿತುಕೊಳ್ಳುವ ಬದಲು ಡೆಲ್ಲಿಗೆ ಹೋಗಿ ಅಲ್ಲೇ ಕುಳಿತು ಹೆಚ್ಚು ಹಣ ಪಡೆಯಲು ಏಕೆ ಪ್ರಯತ್ನ ಮಾಡಬಾರದು?

ಅಧ್ಯಕ್ಷರು.—ಈ ಉಪ ಪ್ರಶ್ನೆಯನ್ನು ದಿನಲೋ ಮಾಡಲಾಗಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೃಷ್ಣಾ ಗೋದಾವರಿ ನೀರನ್ನು ಉಪಯೋಗಿಸಿಕೊಳ್ಳಲು ತೋರಿಸುತ್ತಿರುವಷ್ಟು ಕಾತುರತೆಯನ್ನು ಈ ಕಾವೇರಿ ನೀರಿನ ಬಗ್ಗೆ ಏಕೆ ತೋರಿಸುತ್ತಿಲ್ಲ?

ಶ್ರೀ ವಿರೇಂದ್ರ ಪಾಟೀಲ್.—1924ರ ಕಾವೇರಿ ಅಗ್ರಿಮೆಂಟಿನಲ್ಲಿ ಯಾವ ಯಾವ ಜೋನಿನಲ್ಲಿ ಯಾವ ಯಾವ ನದಿಗಳು ಹರಿಯುತ್ತಿವೆಯೆಂಬುದನ್ನು ಹೇಳಿದ್ದಾರೆ. ಅಗ್ರಿಮೆಂಟಿನ ಅವಧಿ ಮುಗಿಯುವುದರೊಳಗಾಗಿ ಆ ನೀರನ್ನೆಲ್ಲಾ ನಾವು ಉಪಯೋಗ ಮಾಡಿಕೊಳ್ಳಲು ನಾವು ಸರ್ವ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆ. ವಾಯಿದೆ ಮುಗಿದು ಹೋಗತಕ್ಕ ನೀರು ಯಾವುದಿದೆಯೋ ಅದಕ್ಕೆ ಟಾಪ್ ಪ್ರಯಾರಿಟಿಯನ್ನು ಕೊಟ್ಟಿದ್ದೇವೆ. ಇನ್ನು ಎಲ್ಲ ನಮಗೆ ನೀರಿನ ಸಂಪೂರ್ಣ ಅಧಿಕಾರ ನಮ್ಮ ಕೈಯ್ಯಲ್ಲಿಯೇ ಇರುತ್ತದೋ ಅಂಥ ಕಡೆಗಳಲ್ಲಿ ಮಾತ್ರ ಹಣದ ಅಭಾವದಿಂದ ಅದನ್ನು ಹಿಂದಕ್ಕೆ ಇಟ್ಟಿದ್ದೇವೆ. ಈಗ ಈ ಅರ್ಕಾವತಿ ನದಿಯು ಫಾನ್ ಷೆಡ್ಯೂರ್ಡ್ ರಿವರ್ ಲಿಸ್ಟಿನಲ್ಲಿದೆ. ಇದರ ನೀರನ್ನು ಉಪಯೋಗಿಸಿಕೊಳ್ಳತಕ್ಕ ಯಾವ ಸ್ಕೀಮೂ ನಮಗೆ ಅಡ್ಡಿ ಬರುವುದಿಲ್ಲ. ಷೆಡ್ಯೂರ್ಡ್ ರಿವರ್‌ಗಳ ನೀರನ್ನು ಮೊದಲು ಉಪಯೋಗ ಮಾಡಿಕೊಳ್ಳಲು ಪ್ರಯತ್ನ ಮಾಡುತ್ತಿದ್ದೇವೆ. ಎಲ್ಲಾ ನೀರನ್ನೂ ಏಕ ಕಾಲಕ್ಕೆ ಬುಕ್ ಮಾಡುವಷ್ಟು ದುಡ್ಡು ನಮ್ಮಲ್ಲಿಲ್ಲ. ಅದಾಗ್ಯೂ ನಾವು ಈ ಕೆಲಸವನ್ನು ಕೈಬಿಟ್ಟಿದ್ದೇವೆಂದೇನೂ ಹೇಳಲಿಲ್ಲ.

9-00 A.M.

ಶ್ರೀ ಸಿ. ಆರ್. ರಂಗೇಗೌಡ.—ಈಗ ತಾನೇ ಮಾನ್ಯ ಮಂತ್ರಿಗಳು ಮೀಡಿಯಮ್ ಇರಿಗೇಷನ್ನಿಗೆ ನಿರೀಕ್ಷಿಸದಷ್ಟು ಹಣ ಸಿಗುತ್ತಾ ಇಲ್ಲವೆಂದು ಹೇಳಿದರು. ಕೇಂದ್ರ ನೀರಾವರಿ ಸಚಿವರು ಪಾರ್ಲಿಮೆಂಟ್ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ ಮೈಸೂರಿಗೆ ಎಷ್ಟು ಹಣ ಒದಗಿಸಿದರೂ ಅದನ್ನು ಅವರು ಸರಿಯಾಗಿ ಉಪಯೋಗಿಸುತ್ತಾ ಇಲ್ಲವೆಂದು ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

† ಆಲೂರು ಹನುಮಂತಪ್ಪ (ಸಣ್ಣ ನೀರಾವರಿ ಶಾಖೆಯ ಉಪ ಮಂತ್ರಿಗಳು).—ಮೈಸೂರಿನ ವರಿಗೆ ಹಣವನ್ನೇನೋ ಕೊಟ್ಟಿದ್ದಾರೆ. ಆದನ್ನು ಉಪಯೋಗಿಸುತ್ತಾ ಇಲ್ಲವೆಂಬುದಾಗಿ ಹೇಳಿರುವುದು ನನ್ನ ಗಮನಕ್ಕೆ ಬಂದಿಲ್ಲ.

Number of Applicants applied for Cashew Cultivation in Tumkur District.

*Q.—92. Sri K. LAKKAPPA (Hebbur).—

Will the Government be pleased to state:—

(a) the number of applicants who have applied for cashew cultivation in Tumkur District;